ಎಸ್.ಸಿ.ಸಂಖ್ಯೆಃ 497/2021
ಪ್ರಾ.ಸಾ-4

# ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್ -1) ರವರ ನ್ಯಾಯಾಂಗಣದಲ್ಲಿ

## ಎಸ್.ಸಿ. ಸಂಖ್ಯೆಃ 497/2021

ಚಾ.ಸಾ-5 ಪ್ರಾ.ಸಾ- 4

ದಿಃ 22.05.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ನಂದೀಶಪ್ಪ |
| ತಂದೆ ಹೆಸರು | ವೀರಭದ್ರಪ್ಪ |
| ವಯಸ್ಸು | 60 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ಕೆಂಪನಹಳ್ಳಿ, ಯಲಹಂಕ<br>ಬೆಂಗಳೂರು |

ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನನಗೆ ಚಾ.ಸಾ-30 - ಹರೀಶ್ ಅಥವಾ ಈ ಪ್ರಕರಣದ ಆರೋಪಿಗಳ ಪರಿಚಯ ಇಲ್ಲ. ನಾನು ಹರೀಶ್ ರವರ ಮೇಲೆ ನಡೆದ ಹಲ್ಲೆಯನ್ನು ನೋಡಿರುವುದಾಗಿ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರಲಿಲ್ಲ. ನಾನು ಹರೀಶ್ ರವರ ನಡೆದ ಹಲ್ಲೆಯನ್ನು ನೋಡಿರಲಿಲ್ಲ.

2. ಈಗ ನನಗೆ ತೋರಿಸಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಗೆ ತೋರಿಸಿದ ದಾಖಲೆಯನ್ನು ನಿ.ಪಿ-6 ಎಂದು ಗುರುತಿಸಲಾಯಿತು. ಇದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿ.ಪಿ-6(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮಾನ್ಯ ಮುಖ್ಯ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯ ಹೇಳಿಕೆ ಹಾಗು ಕಡತದಲ್ಲಿನ ದಾಖಲೆಗಳನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.

ಎಸ್.ಸಿ.ಸಂಖ್ಯೆಃ 497/2021
ಫ್ರಾ.ಸಾ-4

<u>ಪಾಟೀಸವಾಲುಃ ಮಾನ್ಯ ಅಭಿಯೋಜಕರಿಂದಃ</u>

3. ದಿಃ 14.1.2021 ರಂದು ರಾತ್ರಿ ಸುಮಾರು 10.30 ರ ವೇಳೆಗೆ ನಾನು ಬಸವೇಶ್ವರ ಬಡಾವಣೆಯಲ್ಲಿದ್ದಾಗ ಚಾ.ಸಾ-3 ರವರು ನನಗೆ ಫೋನ್ ಮಾಡಿದ್ದ ಮೇರೆಗೆ ನಾನು ಮತ್ತು ಮಹೇಶ್ ರವರು ಚಾ.ಸಾ-3 ರವರ ಮನೆ ಬಳಿ ಹೋಗಿ ನೋಡಿದಾಗ ಚಾ.ಸಾ-3 ರವರ ಮನೆಯ ಪಕ್ಕದ ಖಾಲಿ ಸೈಟ್ ನಲ್ಲಿ 5 ಜನ ಅಪರಿಚಿತರು ಗುಂಪು ಕಟ್ಟಿಕೊಂಡು ಒಬ್ಬ ಅಪರಿಚಿತ ವ್ಯಕ್ತಿಯನ್ನು ಕೆಳಗೆ ಬೀಳಿಸಿಕೊಂಡು ಲಾಂಗ್, ಚಾಕುಗಳನ್ನು ಹಿಡಿದುಕೊಂಡು ಹಲ್ಲೆ ಮಾಡುತ್ತಿದ್ದರು ಹಾಗು ಸದರಿ ವ್ಯಕ್ತಿಗಳು ನಮ್ಮ ನೋಡಿ ಅಲ್ಲಿಂದ ಓಡಿಹೋಗಿದ್ದರು ಎಂದರೆ ಸರಿಯಲ್ಲ. ಅಲ್ಲಿ ಕೆಳಗೆ ಬಿದ್ದಿದ್ದ ವ್ಯಕ್ತಿಯ ತಲೆಗೆ , ಕುತ್ತಿಗೆಗೆ ಮತ್ತು ಮುಖಕ್ಕೆ ಗಾಯಗಳಾಗಿ ರಕ್ತ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಮಹೇಶ್ ರವರು ಫೋನ್ ಮಾಡಿದಂತೆ ಪೋಲೀಸರು ಸ್ಥಳಕ್ಕೆ ಬಂದು ಆ್ಯಂಬುಲೆನ್ಸ್ ತರಿಸಿ ಗಾಯಗೊಂಡ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ.

4. ದಿಃ 17.1.2021 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದ ಮೇರೆಗೆ ನಾನು ಅಲ್ಲಿಗೆ ಹೋದಾಗ ನನಗೆ ಒಂದು ಫೋಟೋವನ್ನು ತೋರಿಸಿದ್ದರು ಹಾಗು ಅದರಂತೆ ನಾನು ಸದರಿ ಫೋಟೋದಲ್ಲಿದ್ದ ವ್ಯಕ್ತಿಯನ್ನು ಹರೀಶ್ ಅಲಿಯಾಸ್ ತುರೆ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲದೆ ಈ ಆರೋಪಿಗಳು ಹಳೆಯ ದ್ವೇಷದಿಂದ ಸದರಿ ಹರೀಶ್ ಅಲಿಯಾಸ್ ತುರೆ ರವರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿರುವ ವಿಚಾರ ನನಗೆ ತಿಳಿದಿರುವುದಾಗಿ ಹೇಳಿದ್ದೆ ಎಂದರೆ ಸರಿಯಲ್ಲ. ಹಾಗೆಯೆ ನಾನು ಸದರಿ ದಿನದಂದು ಠಾಣೆಯಲ್ಲಿದ್ದ 1 ರಿಂದ 3 ನೇ ಆರೋಪಿಗಳನ್ನು ನೋಡಿ ಸದರಿ ವ್ಯಕ್ತಿಗಳು ಹರೀಶ್ ರವರ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳು ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ.

5. ದಿಃ 15.1.2021 ರಂದು ತನಿಖಾಧಿಕಾರಿಯವರು ಸ್ಥಳಕ್ಕೆ ಬಂದು ನಾನು ಕೃತ್ಯ ಸ್ಥಳವನ್ನು ತೋರಿಸಿದ್ದ ಮೇರೆಗೆ ಪಂಚರ ಸಮಕ್ಷಮ ನಿ.ಪಿ-6 ರಂತೆ ಕೃತ್ಯ ಸ್ಥಳದ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಕಾಲಕ್ಕೆ ಪೋಲೀಸರು ಸ್ಥಳದಿಂದ

ಎಸ್.ಸಿ.ಸಂಖ್ಯೆ: 497/2021
ಪ್ರಾ.ಸಾ-4

ರಕ್ತ ಮಿಶ್ರಿತ ಮಣ್ಣು ಮತ್ತು ಹುಲ್ಲು ಹಾಗು ಮಾದರಿ ಹುಲ್ಲು ಮತ್ತು ಮಣ್ಣನ್ನು ಅಮಾನತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಆ ಕಾಲಕ್ಕೆ ಹಾಜರಿದ್ದು ನಿ.ಪಿ-6 ರಲ್ಲಿ ಗುರುತಿಸಿರುವ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ 17.1.2021 ರಂದು ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನ್ನ ಹೇಳಿಕೆಯಲ್ಲಿ "ದಿಃ 14.1.2021 ರಂದು ... .... …. ಸಹಕರಿಸಿರುತ್ತೇನೆ. " ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಭಾಗದ ಹೇಳಿಕೆಯನ್ನು ನಿ.ಪಿ-7 ಎಂದು ಗುರುತಿಸಲಾಯಿತು.

6. ನನಗೆ ಈ ಪ್ರಕರಣದ ಘಟನೆ ಬಗ್ಗೆ , ನಿ.ಪಿ-6 ರಂತೆ ಮಾಡಿರುವ ಮಹಜರ್ ಬಗ್ಗೆ ಹಾಗು ನಿ.ಪಿ-7 ರಂತೆ ನೀಡಿರುವ ಹೇಳಿಕೆ ಬಗ್ಗೆ ಮಾಹಿತಿ ಇದ್ದರೂ ಈಗ ನಾನು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಗಳ ಪರ ವಕೀಲರು ತಮ್ಮ ಪರ ಪಾಟಿಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.